ಇ) ಫಲ ಪುಷ್ಪ ಪ್ರದರ್ಶನವನ್ನು ತೋಟಗಾರಿಕೆ ಇಲಾಖೆ ಹಾಗೂ ಮೈಸೂರು ಉದ್ಯಾನ ಕಲಾ ಸಂಘದ ಜಂಟಿ ಆಶ್ರಯದಲ್ಲಿ ಕೈ ಗೊಳ್ಳಲಾಗುತ್ತಿದ್ದು ಫಲ ಪುಷ್ಪ ಪ್ರದರ್ಶನ ಆಯೋಜಿಸಲು ತಗುಲುವ ಪೂರ್ಣ ವೆಚ್ಚವನ್ನು ಮೈಸೂರು ಉದ್ಯಾನ ಕಲಾ ಸಂಘವು ಭರಿಸುತ್ತಿದ್ದು ಆದಾಯವನ್ನು ಸಂಘವು ಸಂಗ್ರಹಿಸುತ್ತಿದೆ.

2011–12ನೇ ಸಾಲಿನ ವಿವರ ಈ ಕೆಳಗಿನಂತಿದೆ.

ಕ್ರ ಸಂ.	ಅವಧಿ	ಗಳಿಸಿದ ಆದಾಯ (ಲಕ್ಷಗಳಲ್ಲಿ)	ಭರಿಸಿದ ಖರ್ಚು (ಲಕ್ಷಗಳಲ್ಲಿ)
1	ಸ್ವಾತಂತ್ರ್ಯೋತ್ಸವ ಫಲಪುಷ್ಪ ಪ್ರದರ್ಶನ ಆಗಸ್ಟ್ 2011	126.00	137.00
2	ಗಣರಾಜ್ಯೋತ್ಸವ ಫಲಪುಷ್ಪ ಪ್ರದರ್ಶನ ಜನವರಿ 2012	119.00	164.00

ಸುವರ್ಣ ಭೂಮಿ ಮತ್ಸ್ಯಾಶ್ರಯ ಗುಂಪು ಯೋಜನೆ

501 (328) ಶ್ರೀ ರಾಜಶೇಖರ ಬಸವರಾಜ ಪಾಟೀಲ್ (ಹುಮ್ನಾಬಾದ್) : ಮಾನ್ಯ ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ;–

ಅ) ಹುಮ್ನಾಬಾದ್ ಮತಕ್ಷೇತ್ರದಲ್ಲಿ ಎಷ್ಟು ಫಲಾನುಭವಿಗಳಿಗೆ ಮತ್ಸ್ಯಾಶ್ರಯ ಯೋಜನೆಯ ಸೌಲಭ್ಯಗಳನ್ನು ಒದಗಿಸಲಾಗಿದೆ; ಸಹಾಯ ಧನಗಳ ವಿವರಗಳನ್ನು ಒದಗಿಸುವುದು;

ಶ್ರೀ ಆನಂದ ವಸಂತ ಅಸ್ನೋಟಿಕರ (ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) :

ಅ) ಹುಮ್ನಾಬಾದ್ ಮತಕ್ಷೇತ್ರಕ್ಕೆ ಹಂಚಿಕೆಯಾಗಿರುವ ಮನೆಗಳ ವಿವರ ಕೆಳಗಿನಂತಿರುತ್ತದೆ:–

ವರ್ಷ	ಸಂಖ್ಯೆ
2008–09	4
2009–10	4
2011–12	5
	13

2008–09 ಮತ್ತು 2009–10ರಲ್ಲಿ ಮನೆಗಳ ನಿರ್ಮಾಣದ ಘಟಕ ವೆಚ್ಚವು ರೂ.40,000–00 ಗಳಾಗಿದ್ದು 2011–12 ರಿಂದ ರೂ.60,000–00ಕ್ಕೆ ಹೆಚ್ಚಿಸಲಾಗಿರುತ್ತದೆ. ಪೂರ್ಣ ಮೊತ್ತವನ್ನು ಸಹಾಯಧನವಾಗಿ ನೀಡಲಾಗುವುದು.

ಕುಡಿಯುವ ನೀರಿನ ಸಮಸ್ಯೆ

417 (640) ಶ್ರೀ ಅಪ್ಪಾಜಿ @ ಚನ್ನಬಸವರಾಜ್, ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) : ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;–

ಅ) ಮುದ್ದೇಬಿಹಾಳ ಪಟ್ಟಣದಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಇದನ್ನು ಬಗೆಹರಿಸಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ? (ವಿವರ ನೀಡುವುದು);

ಶ್ರೀ ಬಾಲಚಂದ್ರ ಲಕ್ಷ್ಮಣ ರಾವ್ ಜಾರಕಿ ಹೋಳಿ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು) :

ಅ) ಬಂದಿದೆ.

ಆ) 2ನೇ ಹಂತದ ಕುಡಿಯುವ ನೀರಿನ ಯೋಜನೆಯು ಪೂರ್ಣಗೊಂಡಿದ್ದು, ಮಾರ್ಚ್ 2012ರಲ್ಲಿ ಸದರಿ ಯೋಜನೆಗೆ ಚಾಲನೆ ನೀಡಿ ಒಟ್ಟು 23 ವಾರ್ಡ್‌ಗಳಲ್ಲಿ 8 ವಾರ್ಡ್‌ಗಳಿಗೆ ಪ್ರತಿದಿನ ತಲಾ 120 LPCD ಯಂತೆ 3 ದಿನಕ್ಕೊಮ್ಮೆ ಕುಡಿಯುವ ನೀರಿನ ಸರಬರಾಜು ಮಾಡಲಾಗುತ್ತಿದೆ. ಕೃಷ್ಣಾ ನದಿಯಿಂದ 7.24 MLD ಮತ್ತು ಮುದ್ದೇಬಿಹಾಳ ಪಟ್ಟಣದಲ್ಲಿರುವ 97 ಕೊಳವೆ ಬಾವಿಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ.